Civil Services (Main) Examination, 2024

PHKM-U-KND

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ
*Time Allowed :* ***Three*** *Hours*

ಗರಿಷ್ಠ ಅಂಕಗಳು : **250**
*Maximum Marks :* ***250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are* ***EIGHT*** *questions divided in* ***TWO SECTIONS****.*

*Candidate has to attempt* ***FIVE*** *questions in all.*

*Questions no.* ***1*** *and* ***5*** *are compulsory and out of the remaining, any* ***THREE*** *are to be attempted choosing at least* ***ONE*** *question from each section.*

*The number of marks carried by a question / part is indicated against it.*

*Answers must be written in* ***KANNADA (Kannada script)****.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಕನ್ನಡ ಭಾಷೆ ಬೆಳೆದು ಬಂದ ಹಂತಗಳು *10*

(b) ಕುಮಾರ ವ್ಯಾಸನ "ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯಜಾಣರು ಮೆಚ್ಚುವಂತಿರೆ" ಎಂಬ ಮಾತನ್ನು ವಿವರಿಸಿ *10*

(c) ಭಾಷೆಯಲ್ಲಿ ಕಂಡು ಬರುವ ಅರ್ಥ ಬದಲಾವಣೆಗಳು *10*

(d) ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ನೀತಿ *10*

(e) ಬಂಡಾಯ ಸಾಹಿತ್ಯದಲ್ಲಿ ಕಾಣುವ ಪ್ರತಿಭಟನೆಯ ಸ್ವರೂಪ *10*

**Q2. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :**

(a) ಹರಿಹರನ ರಗಳೆಗಳಲ್ಲಿನ ನಾಯಕರು ಸಾಮಾನ್ಯದಲ್ಲಿ ಅಸಾಮಾನ್ಯರು ಎನ್ನಬಹುದೆ ? ಚರ್ಚಿಸಿ. *20*

(b) "ಕರ್ಣ ರಸಾಯನಮಲ್ತೆ ಭಾರತಂ" ಎಂಬ ಪಂಪಕವಿಯ ಮಾತನ್ನು 'ಪಂಪಭಾರತದ' ಉದಾಹರಣೆಗಳೊಂದಿಗೆ ವಿಶ್ಲೇಷಿಸಿ. *20*

(c) ಕನ್ನಡ ನವ್ಯ ಸಾಹಿತ್ಯ ಚಳುವಳಿಯ ಲಕ್ಷಣಗಳೇನು ? *10*

**Q3. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :**

(a) ದ್ರಾವಿಡ ಭಾಷಾ ಕುಟುಂಬವನ್ನು ಪರಿಚಯಿಸಿ. *20*

(b) ರಾಘವಾಂಕಕವಿಯ 'ಹರಿಶ್ಚಂದ್ರ' ಕಾವ್ಯದಲ್ಲಿ ಬರುವ ಹರಿಶ್ಚಂದ್ರ ಮತ್ತು ಹೊಲತಿಯರ ಸಂಭಾಷಣೆಯನ್ನು ವಿಶ್ಲೇಷಿಸಿ. *20*

(c) 'ಸಾಹಸ ಭೀಮ ವಿಜಯ' ವನ್ನು ರನ್ನ ಕವಿಯು ಸಿಂಹಾವಲೋಕನ ತಂತ್ರದಿಂದ ರಚಿಸಿದ್ದಾನೆ ಎನ್ನಬಹುದೆ ? ವಿವರಿಸಿ. *10*

**Q4. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :**

(a) ಕನ್ನಡದ ಉಪಭಾಷೆಗಳ ವೈಲಕ್ಷಣ್ಯಗಳನ್ನು ಗುರುತಿಸಿ. *20*

(b) 'ಯಶೋಧರ ಚರಿತ್ರೆ' ಯಲ್ಲಿನ ಅಮೃತಮತಿ ಅಷ್ಟಾವಕ್ರನಿಗೆ ಆಕರ್ಷಿತವಾದದ್ದು ವಿಧಿಯ ಆಟ ಎನ್ನಬಹುದೆ ? ವಿಶ್ಲೇಷಿಸಿ. *20*

(c) ಕನ್ನಡ ನವೋದಯ ಸಾಹಿತ್ಯದ ಮೇಲಿನ ಇಂಗ್ಲಿಷ್ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವಗಳನ್ನು ವಿವರಿಸಿ. *10*

## SECTION B

**Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯು ಕನ್ನಡ ಸಾಹಿತ್ಯ ವಿಮರ್ಶೆಯ ಮೇಲೆ ಬೀರಿರುವ ಪರಿಣಾಮಗಳು *10*

(b) ಕನ್ನಡ ಸಾಹಿತ್ಯದ ಮೇಲಿನ ಧಾರ್ಮಿಕ ಪ್ರಭಾವಗಳು *10*

(c) ಕರ್ನಾಟಕದ ಜನಪದ ಕಲೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ *10*

(d) ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆಯ ಸ್ವರೂಪವನ್ನು ಪರಿಚಯಿಸಿ *10*

(e) ಕರ್ನಾಟಕದ ಗುಹಾಂತರ ದೇವಾಲಯಗಳನ್ನು ಪರಿಚಯಿಸಿ *10*

**Q6. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ:**

(a) ರಸಸಿದ್ಧಾಂತವನ್ನು ವಿವರಿಸಿ. *20*

(b) ಅಂಬೇಡ್ಕರ್ ಚಿಂತನೆಗಳು ಕನ್ನಡ ದಲಿತ ಸಾಹಿತ್ಯದ ಮೇಲೆ ಬೀರಿರುವ ಪ್ರಭಾವವನ್ನು ಗುರುತಿಸಿ. *20*

(c) ಕರ್ನಾಟಕ ಏಕೀಕರಣ. *10*

**Q7. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ:**

(a) ಕನ್ನಡ ಜಾನಪದ ಸಾಹಿತ್ಯದಲ್ಲಿ ಮಾನವತಾವಾದಿ ನೆಲೆಗಳ ಸ್ವರೂಪ ಹೇಗೆ ವ್ಯಕ್ತವಾಗಿದೆ ? *20*

(b) ರೂಪನಿಷ್ಠ ವಿಮರ್ಶೆ ಎಂದರೇನು ? ವಿವರಿಸಿ. *20*

(c) ಎ.ಎನ್. ಮೂರ್ತಿರಾಯರ 'ದೇವರು' ಕಥೆಯನ್ನು ವಿಶ್ಲೇಷಿಸಿ. *10*

**Q8.** ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :

(a) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಆನಂದವರ್ಧನನ ಧ್ವನಿ ಸಿದ್ಧಾಂತಕ್ಕಿರುವ ಪ್ರಾಧಾನ್ಯತೆಯನ್ನು ಗುರುತಿಸಿ. *20*

(b) ದೇವನೂರು ಮಹಾದೇವ ಅವರ ಕೃತಿಗಳಲ್ಲಿ ವ್ಯಕ್ತವಾಗುವ 'ಬದುಕಿನ ಜ್ವಲಂತ' ಸತ್ಯಗಳನ್ನು ವಿವರಿಸಿ. *20*

(c) ಕರ್ನಾಟಕ ಸಂಸ್ಕೃತಿಗೆ ಶೈವ ಧರ್ಮದ ಕೊಡುಗೆಗಳೇನು ? ವಿವರಿಸಿ. *10*